# ಸದನದಲ್ಲಿ ಏಕ ವಚನದಲ್ಲಿ ನಿಂದನೆ, ಕೀಳು ಭಾಷೆ ಬಳಕೆ




**ವಿಧಾನಸಭೆ:** ಸಂವಿಧಾನದ ಆಶಯ ಕುರಿತ ವಿಶೇಷ ಚರ್ಚೆಯು 'ಶಾಸಕರ ಅನರ್ಹತೆ' ವಿಚಾರಕ್ಕೆ ಹೊರಳಿ ಬಳಿಕ ಸಚಿವ ಡಾ.ಕೆ.ಸುಧಾಕರ್ ಹಾಗೂ ಮಾಜಿ ವಿಧಾನಸಭಾಧ್ಯಕ್ಷ ರಮೇಶ್ ಕುಮಾರ್ ಪರಸ್ಪರ ಏಕವಚನದಲ್ಲಿ ಬೈದಾಡಿಕೊಂಡು ಕೀಳು, ಅಸಾಂವಿಧಾನಿಕ, ಆಕ್ಷೇಪಾರ್ಹ ಭಾಷೆಗಳಲ್ಲಿ ಜಟಾಪಟಿ ನಡೆಸಿದ ಪ್ರಕರಣ ಮಂಗಳವಾರ ನಡೆಯಿತು.

ಸಚಿವ ಡಾ.ಕೆ.ಸುಧಾಕರ್ ಅವರ ಮಾತುಗಳಿಂದ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಹಕ್ಕು ಚ್ಯುತಿಯಾಗಿದೆ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಆರೋಪಿಸಿದರೆ, ರಮೇಶ್‌ಕುಮಾರ್ ಅಮಾನತಿಗೆ ಬಿಜೆಪಿ ಆಗ್ರಹಿಸಿತು. ಗದ್ದಲ ಹೆಚ್ಚಾಗಿದ್ದರಿಂದ ಸದನವನ್ನು ಬುಧವಾರಕ್ಕೆ ಮುಂದೂಡಲಾಯಿತು.

**ಜಟಾಪಟಿ- 1:** ಸಂವಿಧಾನದ ಆಶಯಗಳ ಬಗ್ಗೆ ಮಾತನಾಡಿದ ಸಚಿವ ಡಾ.ಕೆ. ಸುಧಾಕರ್, ಲೋಕಸಭೆ, ರಾಜ್ಯಸಭೆಯಲ್ಲಿ ಅಂಗೀಕಾರವಾಗಿ ಜಾರಿಯಾದ ಕಾಯ್ದೆ ಬಗ್ಗೆ ಹೋರಾಟಕ್ಕೆ ಕುಮ್ಮಕ್ಕು ನೀಡುತ್ತಿವೆ. 40-50 ವರ್ಷ ಆಡಳಿತ ನಡೆಸಿದ ಪಕ್ಷಗಳು ನೇತೃತ್ವ ವಹಿಸುತ್ತಿವೆ ಎಂದರು.

ಮಧ್ಯಪ್ರವೇಶಿಸಿದ ರಮೇಶ್‌ಕುಮಾರ್, ಪ್ರಜಾಪ್ರಭುತ್ವದಲ್ಲಿ ಜನ ತಮ್ಮ ಅಭಿಪ್ರಾಯ ಹೇಳಲು ಸ್ವತಂತ್ರರು. ಕಾಯ್ದೆಯಿಂದ ಸಂವಿಧಾನದ ಉಲ್ಲಂಘನೆಯಾಗಿದೆ ಎನಿಸಿ ಹೋರಾಟಕ್ಕಿಳಿದಿದ್ದಾರೆ ಎಂದರು. ಮತ್ತೆ ಮಾತು ಮುಂದುವರಿಸಿದ ಡಾ.ಕೆ.ಸುಧಾಕರ್, ನಾನು ಪ್ರಮುಖ ರಾಜಕೀಯ ಪಕ್ಷಗಳು ಕುಮ್ಮಕ್ಕು ಎಂದಿದ್ದೇನೆಯೇ ಹೊರತು ಯಾವುದೇ ಪಕ್ಷದ ಹೆಸರು ಹೇಳಿಲ್ಲ ಎಂದು ಸಮರ್ಥನೆ ನೀಡಿದರು. ▶ 7ನೇ ಪುಟಕ್ಕೆ

# ಸದನದಲ್ಲಿ ಏಕ ವಚನದಲ್ಲಿ ನಿಂದನೆ, ಕೀಳು ಭಾಷೆ ಬಳಕೆ

11/3/20

**1ನೇ ಪುಟದಿಂದ** ▶ ಕೋಪಗೊಂಡ ರಮೇಶ್ ಕುಮಾರ್, ನಾವು ನಂಬಿದ ಸಿದ್ಧಾಂತಕ್ಕೆ ಬದ್ಧವಾಗಿ ಹೋರಾಟ ಮಾಡುತ್ತಿದ್ದೇವೆ. ಸಿಎಎ ವಿಚಾರದಲ್ಲಿ ನಾವು ಸಂಚು ಮಾಡುತ್ತಿಲ್ಲ, ನಿಮ್ಮ ಉಪದೇಶ ಬೇಕಿಲ್ಲ ಎಂದು ಹೇಳಿದರು. ಇದಕ್ಕೆ ಅಷ್ಟೇ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ವಿ.ಸೋಮಣ್ಣ ನಮಗೂ ನಿಮ್ಮ ಉಪದೇಶ ಬೇಕಿಲ್ಲ ಎಂದು ಕಿಡಿ ಕಾರಿದರು.

**ಜಟಾಪಟಿ- 2:** ಮತ್ತೆ ಮಾತು ಮುಂದುವರಿಸಿದ ಡಾ.ಕೆ.ಸುಧಾಕರ್, ಸಂವಿಧಾನವನ್ನು ಧಿಕ್ಕರಿಸಲಾಗುತ್ತಿದೆ ಎಂದು ಕೆಲವರು ಆರೋಪಿಸುತ್ತಿದ್ದಾರೆ. ನಿಜವಾಗಿ ಸಂವಿಧಾನವನ್ನು ಉಳಿಸಿದವರು ಯಾರು? ತುರ್ತು ಪರಿಸ್ಥಿತಿ ತಂದವರು ಯಾರು? ಆಗ ಮಾನವ ಹಕ್ಕುಗಳಿಗೆ ಬೆಲೆ ಇತ್ತೆ? ಎಂದು ಪ್ರಶ್ನಿಸಿದರು.

ಈ ಮಧ್ಯೆ ಕೆ.ಆರ್.ರಮೇಶ್ ಕುಮಾರ್, ಸಿಎಂ ಯಡಿಯೂರಪ್ಪ, ಕೆ.ಎಸ್.ಈಶ್ವರಪ್ಪ, ಸುರೇಶ್ ಕುಮಾರ್ ಜೈಲಿಗೆ ಹೋಗಿದ್ದು ಅವರು ತುರ್ತು ಪರಿಸ್ಥಿತಿ ಬಗ್ಗೆ ಮಾತನಾಡಲಿ. ನೀವೆಲ್ಲಾ ಮಾತನಾಡುವಂತಾದರೆ ಹೇಗೆ ಎಂದು ಪ್ರಶ್ನಿಸಿದರು. ಬಳಿಕ 'ಇದೇ ಸುಧಾಕರ್ ನಾಲ್ಕು ತಿಂಗಳ ಕಾಲ ಲಂಡನ್‌ನಲ್ಲಿ ರಾಹುಲ್ ಗಾಂಧಿ ಅವರೊಂದಿಗಿದ್ದರು' ಎನ್ನುತ್ತಾ ಸದನದಿಂದ ಹೊರ ನಡೆದರು.

'ಸಂವಿಧಾನದ ಹಲವು ಸಾಂವಿಧಾನಿಕ ಪೀಠಗಳಲ್ಲಿ ಒಂದಾದ ಈ ಪೀಠ (ವಿಧಾನಸಭಾಧ್ಯಕ್ಷರು)ದಿಂದ ಅನ್ಯಾಯವಾಗಿದೆ. ಹಾಗೆ ಅನ್ಯಾಯಕ್ಕೆ ಒಳಗಾದವರಲ್ಲಿ ನಾನು ಒಬ್ಬ' ಎಂದ ಸುಧಾಕರ್, 17 ಮಂದಿ ಶಾಸಕರ ಅನರ್ಹತೆ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ಆದೇಶವನ್ನು ವಾಚಿಸಲಾರಂಭಿಸಿರು. ಆಗ ವಿಧಾನಸಭಾಧ್ಯಕ್ಷರ ಪೀಠದಲ್ಲಿದ್ದ ಶಿವಾನಂದ ಪಾಟೀಲ್, ಈ ಪ್ರಕರಣ ಸಂಬಂಧ ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದು ಈ ಬಗ್ಗೆ ಪ್ರಸ್ತಾಪ ಅಗತ್ಯವೇ. ಚರ್ಚೆ ಮುಕ್ತಾಯಗೊಳಿಸಿ ಎಂದು ಸೂಚಿಸಿದರು.

**ಜಟಾಪಟಿ- 3:** ಆದರೂ ಮಾತು ಮುಂದುವರಿಸಿದ ಡಾ.ಕೆ.ಸುಧಾಕರ್, 17 ಮಂದಿಯ ರಾಜಕೀಯ ಭವಿಷ್ಯವನ್ನು ಕೊನೆಗೊಳಿಸುವ ಷಡ್ಯಂತ್ರ ನಡೆದಿತ್ತು. ನಮ್ಮ ವಿರುದ್ಧ ಷಡ್ಯಂತ್ರ ನಡೆಸಿದರು ಎಂದು ಆರೋಪಿಸಿದರು. ಆಗ ಕಾಂಗ್ರೆಸ್ ಶಾಸಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಈ ಮಧ್ಯೆ, ಮೊಗಸಾಲೆಯಲ್ಲಿ ಸದನ ಕಲಾಪ ನೇರ ಪ್ರಸಾರ ವೀಕ್ಷಿಸುತ್ತಿದ್ದ ಕೆ.ಆರ್.ರಮೇಶ್ ಕುಮಾರ್, ಕೋಪದಿಂದಲೇ ಸದನಕ್ಕೆ ಬಂದವರು, ಸುಪ್ರೀಂ ತೀರ್ಪನ್ನು ಈ ರೀತಿ ಚರ್ಚಿಸಲು ಅವಕಾಶ ಕೊಡುತ್ತೀರಾ ಎಂದು ಪ್ರಶ್ನಿಸಿದಾಗ ಸಚಿವ ಜೆ.ಸಿ.ಮಾಧುಸ್ವಾಮಿ ಇಲ್ಲ ಎಂಬಂತೆ ಕೈ ಆಡಿಸಿದರು. ಇದು ಇನ್ನಷ್ಟು ಗದ್ದಲಕ್ಕೆ ಕಾರಣವಾಯಿತು.

ಆಗ ಸುಧಾಕರ್, 'ನೀನು ಏನ್ ಮಾತಾಡ್ತಿದ್ದೀಯಾ. ನೀನೊಬ್ಬ ಡ್ರಾಮಾ ಮಾಸ್ಟರ್' ಎಂದು ಕುಟುಕಿದರು. ಆಗ ರಮೇಶ್ ಕುಮಾರ್, 'ನೀನು ಮಾಡಿದ ಕೆಲಸಕ್ಕೆ ನಾಚಿಕೆಯಾಗುವುದಿಲ್ಲವೇ?' ಎಂದರು. ಇದಕ್ಕೆ ಬಿಜೆಪಿ ಶಾಸಕರು ಆಕ್ಷೇಪ ವ್ಯಕ್ತಪಡಿಸಿದರು. ಸಚಿವ ರಮೇಶ್ ಜಾರಕಿಹೊಳಿ ಕೂಡ ನಿಂದಿಸಿದ ರಮೇಶ್‌ಕುಮಾರ್ ಅವರನ್ನು ಬಿಡಬಾರದು ಎಂದು ಗುಡುಗಿದರು. ಕೋಲಾಹಲದ ವಾತಾವರಣ ಸೃಷ್ಟಿಯಾಗುತ್ತಿದ್ದಂತೆ ಶಿವಾನಂದ ಪಾಟೀಲ್ ಸದನವನ್ನು ಮುಂದೂಡಿದರು.

ಒಂದು ಗಂಟೆ ಬಳಿಕ ಸಭೆ ಸೇರುತ್ತಿದ್ದಂತೆ ಡಾ.ಕೆ. ಸುಧಾಕರ್, ಇದೊಂದು ನೋವಿನ ಸಂಗತಿ, ನಮ್ಮ ರಕ್ಷಣೆಗೆ ಸ್ಪೀಕರ್ ಧಾವಿಸಬೇಕು ಎಂದು ಮನವಿ ಮಾಡಿದರು. ಬಿಜೆಪಿ ಶಾಸಕರು, ರಮೇಶ್ ಕುಮಾರ್ ಅವರನ್ನು ಹೊರಕ್ಕೆ ಕಳುಹಿಸಬೇಕು, ಅಮಾನತು ಪಡಿಸಬೇಕು ಎಂದು ಆಗ್ರಹಿಸಿದರು. ಆಗ ಸ್ಪೀಕರ್ ಕಾಗೇರಿ, ಅವರು ಸದನದಲ್ಲಿ ಇಲ್ಲ ಎಂದು ಹೇಳಿದರು. ಸಿದ್ದರಾಮಯ್ಯ, ನಮ್ಮ ಸದಸ್ಯರು ಹಾಗೂ ಸದನದ ಹಕ್ಕು ಚ್ಯುತಿಯಾಗಿದ್ದು ಈ ಸಂಬಂಧ ಸ್ಪೀಕರ್ ಹಾಗೂ ವಿಧಾನಸಭೆಯ ಕಾರ್ಯದರ್ಶಿಗಳಿಗೆ ನೋಟಿಸ್ ನೀಡಿದ್ದು ಪ್ರಸ್ತಾಪಿಸಲು ಅವಕಾಶ ನೀಡುವಂತೆ ಮನವಿ ಮಾಡಿದರು. ಆದರೆ ಬಿಜೆಪಿ, ಕಾಂಗ್ರೆಸ್ ಸದಸ್ಯರು ಆರೋಪ- ಪ್ರತ್ಯಾರೋಪದಲ್ಲಿ ತೊಡಗಿದ್ದರಿಂದ ಸದನವನ್ನು ಬುಧವಾರಕ್ಕೆ ಮುಂದೂಡಲಾಯಿತು.